768 ಶ್ರೀ ಹ್ಯಾರೀಸ್ ಎನ್.ಎ (ಶಾಂತಿನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನೆರೆ ಹಾವಳಿಯ ದುಷ್ಪರಿಣಾಮಗಳಿಗೆ ಒಳಗಾಗಿರುವ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಈವರೆವಿಗೆ ಕೈಗೊಂಡ ಪರಿಹಾರ ಕ್ರಮಗಳೇನು; ವಿಶೇಷತ: ವಸತಿ ಪುನರ್ ನಿರ್ಮಾಣ ಕಾಮಗಾರಿಗಳ ವಿವರಗಳೇನು?

ಆ) ಉತ್ತರ ಕನ್ನಡ ಪ್ರವಾಹ ಪೀಡಿತ ಸದರಿ ಜಿಲ್ಲೆಗಳಲ್ಲಿ ವಸತಿ ಪುನರ್ ನಿರ್ಮಾಣಕ್ಕಾಗಿ ಎಷ್ಟು ಎಕರೆ ಜಮೀನುಗಳನ್ನು ಗುರುತಿಸಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗಿದೆ;

ಶ್ರೀ ಜಿ.ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) (1) ನೆರೆ ಹಾವಳಿಯ ದುಷ್ಪರಿಣಾಮಗಳಿಗೆ ಒಳಗಾಗಿರುವ ಉತ್ತರ ಕನ್ನಡ ಜಿಲ್ಲೆಯಲ್ಲಿ ಈವರೆಗೆ 23 ಜನ ಮೃತಪಟ್ಟಿದ್ದು, ಮೃತರ ವಾರಸುದಾರರಿಗೆ ರೂ.23.00 ಲಕ್ಷ ಪರಿಹಾರ ಧನ ನೀಡಲಾಗಿದೆ. 19 ಜಾನುವಾರುಗಳಿಗೆ ರೂ.1.835 ಲಕ್ಷ, ಮನೆ ಹಾನಿಗೆ ರೂ.147.295 ಲಕ್ಷ ಹಾಗೂ ಬೆಳೆ ಹಾನಿ ಕುರಿತು ರೂ.14.89 ಲಕ್ಷ ಪರಿಹಾರ ವಿತರಣೆ ಮಾಡಲಾಗಿದೆ. ಜಿಲ್ಲೆಯಲ್ಲಿ ಈವರೆಗೆ 758 ಕಾಮಗಾರಿಗಳಿಗೆ ರೂ.1479.24 ಲಕ್ಷಗಳಿಗೆ ಮಂಜೂರಾತಿ ನೀಡಲಾಗಿದೆ.

(2) ಜಿಲ್ಲೆಯ ಕಾರವಾರ ತಾಲ್ಲೂಕಿನ ಕಡವಾಡದಲ್ಲಿ ಗುಡ್ಡ ಕುಸಿತದಿಂದ ನಿರ್ವಸಿತರಾದ ಕುಟುಂಬಗಳಿಗೆ 50 ಮನೆಗಳನ್ನು ನಿರ್ಮಿಸುವ ಕುರಿತು ಪ್ರಕ್ರಿಯೆ ಪ್ರಗತಿಯಲ್ಲಿದೆ. ರಸ್ತೆ, ಕುಡಿಯುವ ನೀರು, ವಿದ್ಯುತ್ ಪ್ರಗತಿಯಲ್ಲಿದೆ. ರಸ್ತೆ, ಕುಡಿಯುವ ನೀರು, ವಿದ್ಯುತ್ ಹಾಗೂ ಇತರೇ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಕ್ರಮ ಕೈಗೊಳ್ಳಲಾಗಿದೆ.

ಆ) ಉತ್ತರ ಕನ್ನಡ ಜಿಲ್ಲೆಯ ಕಾರವಾರ ತಾಲ್ಲೂಕಿನಲ್ಲಿ ನಿರಾಶ್ರಿತರ ಪುನರ್ವಸತಿಗೆ ಕ್ಷೇತ್ರ 3-3-12 (ಎ-ಗು-ಆ) ಜಮೀನು ಖರೀದಿಸಲಾಗಿದೆ. ಸದ್ರಿ ಜಮೀನಿನಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಜಿಲ್ಲಾ ಪಂಚಾಯತ್ ಹಾಗೂ ವಿದ್ಯುತ್ ಇಲಾಖೆಯವರು ಈಗಾಗಲೇ ಕ್ರಮ ಕೈಗೊಂಡಿರುತ್ತಾರೆ ನಿರಾಶ್ರಿತರಿಗೆ ಸೇವಾ ಭಾರತಿ ಟ್ರಸ್ಟ್, ಹುಬ್ಬಳ್ಳಿಯವರು ಮನೆ ಕಟ್ಟಿಕೊಡಲು ಒಪ್ಪಿರುತ್ತಾರೆ.